"ಯಾಕ್ರೀ? ಆಡಬಾರದ್ದೇನಾದ್ರೂ ಆಡಿದ್ರೇನ್ರೀ?"

"ಛೇಛೇ, ಹಂಗೇನಿಲ್ಲ. ಆದ್ರೂ..."

"ಹೋಗ್ಲಿ ಬಿಡಿ. ಋಣ ಇಲ್ಲ ಅಂದ್ಕಂಡ್ರಾಯ್ತುಪ್ಪಾ..." ಗಾಯಕ್ಕೆ ಮುಲಾಮು ಸವರುವ ಮಾತಾಡುವುದರಲ್ಲಿ ಸೀತೆ ನಿಸ್ಸೀಮೆ.

ಮುಂದೆ ಚಿಕ್ಕಪ್ಪ ಆ ಜಮೀನು ಮಾರಿಕೊಂಡು, ಪತ್ನೀಸಮೇತನಾಗಿ ಮಗಳ ಮನೆ ಸೇರಿಕೊಂಡಿದ್ದೆಲ್ಲಾ ಹತ್ತು ವರ್ಷಗಳ ಹಿಂದಿನ ಕತೆ. ಈಗ ಚಿಕ್ಕಿಯೂ ಇಲ್ಲ, ಅಮೃತಾ ಕೂಡಾ...

ಗಂಟಲಸೆರೆ ಉಬ್ಬಿದಂತಾಯ್ತು ನಾಗರಾಜನಿಗೆ. 'ನಾಗಣ್ಣ... ನಾಗಣ್ಣ...' ಎನ್ನುತ್ತಾ ಹಿಂದೆಮುಂದೆ ಸುತ್ತಾಡಿಕೊಂಡಿದ್ದ ಹುಡುಗಿ. ಬಾಲ್ಯದ ನೆನವರಿಕೆ ಅಂದರೆ ಅದೊಂದು ಮನಸ್ಸನ್ನು ಆರ್ದ್ರಗೊಳಿಸಿ ಭಾವುಕನನ್ನಾಗಿಸುವ ನೆನಪುಗಳ ಸರಮಾಲೆ. ಇಬ್ಬರ ಮನೆಗಳೂ 'ಕೂ...' ಹಾಕಿದರೆ ಕೇಳುವಷ್ಟು ಹತ್ತಿರ ಅಥವಾ ದೂರ. ಬೇರೆಬೇರೆ ಮನೆ ಮಾಡಿಕೊಂಡು ಪ್ರತ್ಯೇಕ ಇದ್ದಿದ್ದರಿಂದ ಇರಬೇಕು, ದಾಯಾದಿಗಳಲ್ಲಿರುವ ಯಾವ ವೈಮನಸ್ಯವೂ ಇಲ್ಲದೆ ಎರಡು ಮನೆಗಳಲ್ಲೂ ಹೊಕ್ಕುಬಳಕೆ ಸಲೀಸಾಗಿತ್ತು. ಎಷ್ಟು ಸಲೀಸು ಅಂದರೆ ಈ ಅಣ್ಣ, ತಂಗಿ ತಂತಮ್ಮ ಮನೆಗಳಲ್ಲೇ ಊಟ, ತಿಂಡಿ ಮಾಡಿಕೊಂಡಿರಬೇಕು, ಅಲ್ಲೇ ಮಲಗಬೇಕು, ಇಲ್ಲೇ ಏಳಬೇಕು ಎನ್ನುವ ಯಾವ ಕಟ್ಟುನಿಟ್ಟೂ ಇರಲಿಲ್ಲ. "ಹಿರಿಯಮ್ಮಾ, ತಲೆ ಬಾಚ್ತೀಯನೇ?" ಎನ್ನುತ್ತಾ ಕೂದಲು ಬಿರಿ ಹುಯ್ದುಕೊಂಡು ಬರುತ್ತಿದ್ದವಳ ಚಿತ್ರ ಇನ್ನೂ ನಾಗರಾಜನ ಕಣ್ಣುಗಳಲ್ಲಿ ಅಚ್ಚೊತ್ತಿದಂತಿದೆ.

ಹಿರಿಯಮ್ಮ ಜಿಡುಕು ಬಿಡಿಸಿ ತಲೆ ಬಾಚಿದರೆ ಈ ಅಣ್ಣ ಬೆಳಗಾಮುಂಚೆ ಹಾಡ್ಯದಿಂದ ಹೆರಕಿಕೊಂಡು ತಂದಿರುತ್ತಿದ್ದ ರಂಜದ ಹೂಗಳನ್ನು ಬಾಳೆನಾರಿನಲ್ಲಿ ಸುರಿದು ಮಾಲೆ ಮಾಡಿಟ್ಟಿರುತ್ತಿದ್ದ. ಅಮ್ಮ ಅವಳ ಎರಡು ಜಡೆಗೂ ಸೇರಿಸಿ ಸೇತುವೆಯಂತೆ ಹೂಮಾಲೆ ಮುಡಿಸಿ, ತಿರುಗಿಸಿ ಕೂರಿಸಿಕೊಂಡು ಮುಂದಲೆ ಬಾಚಿ, ಮುಖದ ಮುಂದೆ ಎರಡೂ ಕೈ ನಿವಾಳಿಸಿ ನೆಟಿಗೆ ತೆಗೆದು, ಮೂಳೆಯ ಸಂದುಗಳ ಚಟಚಟ ಜಾಸ್ತಿ ಕೇಳಿಸಿದಷ್ಟೂ ಹುಡುಗಿಗೆ ಖುಷಿ. ತಾನು ಅಷ್ಟು ಚೆನ್ನಾಗಿ ದೃಷ್ಟಿ ಬೀಳುವ ಹಾಗೆ ಕಾಣಿಸುತ್ತಿದ್ದೇನೆ ಎನ್ನುವ ಜಂಭ.

ತಂಗಿಯ ಜವಾಬ್ದಾರಿಯನ್ನು ತಾನೇ ತಲೆಯ ಮೇಲೆ ಹೊತ್ತಿದ್ದೇನೆ ಎನ್ನುವಂತೆ ಅವಳ ಬೆಂಗಾವಲಾಗಿ ಸ್ಕೂಲಿಗೆ ಹೋಗಿಬರುತ್ತಿದ್ದಿದ್ದು, ಅವಳು ಚಾಳಿ ಬಿಟ್ಟವರು ಇವನಿಗೂ ವೈರಿಗಳಾಗಿ, ಅವಳಿಗೇನಾದರೂ ಹುಷಾರು ತಪ್ಪಿ ಸ್ಕೂಲಿಗೆ ಚಕ್ರ ಹಾಕಿದರೆ ಇವನೂ ಕಳ್ಳತಪ್ಪಿಸಿಕೊಳ್ಳುತ್ತಿದ್ದಿದ್ದು, ಅವಳು ಬಿದ್ದು ಗಾಯ ಮಾಡಿಕೊಂಡ ಮಂಡಿಗೆ ಇವನು ತನ್ನ ಎಂಜಲು ಸವರಿದಂತಾ ನಿಕೃಷ್ಟ ಸಂಗತಿ ಕೂಡಾ ಮನದ ಭಿತ್ತಿಯಲ್ಲಿ ಮಧುರ ನೆನಪಾಗಿ ಉಳಿದುಕೊಂಡಿದೆ. ಅವಳು ಮದುವೆಯಾಗಿ ಗಂಡನ ಮನೆಗೆ ಹೊರಟು ನಿಂತಾಗ ಚಿಕ್ಕಪ್ಪ, ಚಿಕ್ಕಿಗಿಂತಾ ಹೆಚ್ಚು ಕಣ್ಣೀರು ಹಾಕಿದ್ದು ಇವನೇ, ನಾಗರಾಜ. ಒಬ್ಬಳೇ ಮಗಳು ಮದುವೆ ಮಾಡಿಕೊಂಡು ಹೊರಟು ಹೋದ ಮೇಲೆ ಚಿಕ್ಕಪ್ಪ ಇವನಿಗೆ ಮತ್ತಷ್ಟು ಆತುಕೊಂಡರು. ಎಸ್ಸೆಸ್ಸೆಲ್ಸಿ ಮುಗಿಸಿ ಮನೆಗೆ ಕಚ್ಚಿಕೊಂಡಿದ್ದ ಇವನು ಎರಡೂ ಮನೆಗಳಲ್ಲಿ ಓಡಾಡುತ್ತಾ, "ಚಿಕ್ಕೀ, ಪೇಟೆಗೆ ಹೋಗ್ತಿದೀನಿ. ಏನಾರೂ ತರ್ಬೇಕನೇ?" ನೆನಪಿಸಿಕೊಂಡು, ನೆನಪಿಸಿಕೊಂಡು ಹೇಳುವ ಚಿಕ್ಕಿ. ಕೆಳದುಟಿಯನ್ನು ನಸುವೇ ಕಚ್ಚಿಕೊಂಡು, ತಲೆ ಓರೆ ಮಾಡಿಕೊಂಡು, ಸಣ್ಣಗೆ ಹರಿದ ಕ್ಯಾಲೆಂಡರ್ ಹಾಳೆಯಲ್ಲಿ ಇವನು ಸಾಮಾನು ಪಟ್ಟಿ ಬರೆದಿದ್ದೆಷ್ಟೋ...

★★★

ಒಡಲೊಳಗಿಂದ ದುಃಖ ಉಮ್ಮಳಿಸಿ ಬರುತ್ತಿದೆ ನಾಗರಾಜನಿಗೆ. ಯಾಕೆ ಮನುಷ್ಯ ಬದಲಾಗುತ್ತಾ ಹೋಗುತ್ತಾನೆ? ಮನುಷ್ಯನ ಬಾಹ್ಯರೂಪ ಬದಲಾಗುವುದು ಸ್ವಾಭಾವಿಕ. ವಯೋಸಹಜ. ಆದರೆ, ಅಂತರಂಗ ಯಾಕೆ ಬದಲಾಗಬೇಕು?